ಕಡು ಬಡತನ, ಬೆಳೆದು ಬಂದ ವಾತಾವರಣ ಕಾರಣವಾಗಿ ನಾನು ಸಮಾಜವನ್ನು ಎದುರಿಸುವ ಬಂಡಾಯಗಾರ, ಛಲಗಾರನಾಗಬೇಕಿತ್ತು ಅಥವಾ ವಿನಮ್ರತೆಯ ಹಾದಿ ತುಳಿಯಬೇಕಿತ್ತು. ಉಪವಾಸವಿದ್ದರೂ ಸರಿ, ಯಾರಿಂದಲೂ ಏನೂ ಬೇಡಬೇಡ, ಎಂದು ಬೋಧಿಸಿದ ಅವ್ವ ನನ್ನ ಪರಮಗುರು. ಸ್ವಾಭಿಮಾನ ಹಾಗೂ ವಿನಮ್ರತೆ ನಾವು ಕಂಡುಕೊಂಡ ದಾರಿ. ದುಡಿದೆವು, ಕೂಲಿ ಮಾಡಿದೆವು, ಹೊಟ್ಟೆ ಹೊರೆದೆವು. ಪುಕ್ಕಟೆ ಮಾತ್ರ ಬೇಡಲಿಲ್ಲ. ಬಯಸಿದ್ದು ಸಿಗಲಿಲ್ಲ. ಆದರೆ ಕಲಿಯುತ್ತ, ಬೆಳೆಯುತ್ತ ಸಮಾಜದಲ್ಲಿ ಅಲ್ಪಸ್ವಲ್ಪ ಸಾಧನೆ ಮಾಡುತ್ತ, ಸಿಕ್ಕಿದ್ದು ನಮ್ಮ ಪಾಲಿಗೆ ಪ್ರಸಾದವಾಗಿತ್ತು. ನಾನು ಸ್ವಾಭಿಮಾನವನ್ನು ಉಳಿಸಿಕೊಳ್ಳುತ್ತಲೇ ವಿನಯದ ಸ್ವಂತಿಕೆಯನ್ನು, ಗೌರವವನ್ನು ಸಂಪಾದಿಸಿಕೊಂಡಿದ್ದೇನೆ. ಹೀಗಾಗಿ ಹುಬೇಹೂ ನನಗೆ ಅನ್ಯಾಯ, ಅಪಮಾನ ಮಾಡಿದ ಗೆಳೆಯರನ್ನು, ಗೆಳತಿಯರನ್ನು, ಸಂಗಾತಿಗಳನ್ನು, ಶಿಕ್ಷಕರನ್ನು, ಪ್ರಮುಖರನ್ನು ಸಹಿಸಿಕೊಂಡಿದ್ದೇನೆ. ಅನ್ಯಾಯ ಆ ಕ್ಷಣದಲ್ಲಿ ನನ್ನನ್ನು ನೋಯಿಸಿದ್ದು ನಿಜ, ಆದರೆ ಮುಂದಿನ ದಿನಗಳಲ್ಲಿ ಸಹನೆ ಶಕ್ತಿಯಾಗಿ ಕಾಪಾಡಿದೆ. ನಂತರದ ದಿನಗಳಲ್ಲಿ ಹಿರಿಯರು ಅನಿಸಿಕೊಂಡ ಅಥವಾ ಅಂದುಕೊಂಡ ಬಹಳ ಜನರೊಡನೆ ಒಡನಾಟ ಬಂತು. ಅಸಂತೋಷದ ಪ್ರಸಂಗಗಳನ್ನು ಎದುರಿಸಿದೆ. ಯಾರೊಡನೆಯೂ ಬಹಿರಂಗವಾಗಿ ಜಗಳ ಕಾಯಲಿಲ್ಲ. ಆದರೆ ಅವರ ಸಣ್ಣತನ, ಕ್ಷುಲ್ಲಕತನವನ್ನು ನೇರವಾಗಿ ಹೇಳಿ ಅವರಿಂದ ದೂರವಾದೆ. ಇಲ್ಲಿ ಅಂಥ ವಿಭಿನ್ನ ಉದಾಹರಣೆಗಳನ್ನು ಸೂಚ್ಯವಾಗಿ, ಸಂಕ್ಷಿಪ್ತವಾಗಿ ಹೇಳುತ್ತೇನೆ.

ಬೇಂದ್ರೆಯವರು ತಮ್ಮ ಎದುರಿನ ಯಾರನ್ನೂ ಸಹಿಸುತ್ತಿರಲಿಲ್ಲ. ಅವರವೇ ಆಗಿದ್ದ ಜಯಕರ್ನಾಟಕ, ಗೆಳೆಯರ ಬಳಗ, ಸಾಹಿತ್ಯವಲಯ ಎಲ್ಲವೂ ಅವರಿಗೆ ಪ್ರತಿ–ಖಲ–ಸೃಷ್ಟಿಯಾಗಿ ಕಂಡವು. ತಮಗಿಂತ ಮುಂದೆ ಬರುತ್ತಾರೆ ಎಂದೆನಿಸಿದಾಗ ಎದುರಾಳಿಯ ವಯಸ್ಸು, ಗೌರವ, ಘನತೆಗಳ ಮೇಲೆ ನೇರ ದಾಳಿ ಮಾಡುವ ಸ್ವಭಾವ ರೂಢಿಸಿಕೊಂಡಿದ್ದರು ಎಂದು ನನಗನಿಸಿದೆ. ಸಾಲಿ ರಾಮಚಂದ್ರರಾಯರ ಕನ್ನಡಪ್ರೇಮ ಮತ್ತು ಅವರ 'ರಾಮಾಯಣ'ದ ಬಗ್ಗೆ ಬೇಂದ್ರೆ ಆಡಿದ ವ್ಯಂಗ್ಯದ ಮಾತು, ಡಾ. ಕೆ.ಆರ್. ಮಹಿಷಿ ಮುಂತಾದವರಿಂದ ಬರೆಸಿದ ಅಸಹನೀಯ ವಿಮರ್ಶೆ ಇದಕ್ಕೆ ಒಂದು ಸ್ಪಷ್ಟ ಉದಾಹರಣೆ. ಈ ಬಗ್ಗೆ ಈ ಮೊದಲೂ ನಾನು ವಿವರವಾಗಿ ಬರೆದಿದ್ದೇನೆ. ಅಂಥದರಲ್ಲಿ, ಅನುಭವ, ಪ್ರತಿಷ್ಠೆ, ಖ್ಯಾತಿ, ಪ್ರಚಾರ, ಹುಚ್ಚು ಹಟ ಮುಂತಾದ್ದರಲ್ಲಿ ಅವರಿಗಿಂತ ಸಣ್ಣವರಾಗಿದ್ದ ನಾವು, ಅವರೊಡನೆ ನೇರವಾಗಿ ಹೋಗುವುದನ್ನು ನಾನು ದೂರವಾಗಿ ಇಟ್ಟೆ. ಇದು ನಿಃಶಕ್ತಿಯಲ್ಲ. ಬೇಂದ್ರೆ ನನಗೆ ಏನೂ ಒಳ್ಳೆಯದು ಮಾಡಬೇಕಿರಲಿಲ್ಲ; ಯಾವುದೇ ಸಮಾನ ವಯಸ್ಸು, ಅಪೇಕ್ಷೆ, ಜಾಯಮಾನಗಳು ನಮ್ಮನ್ನು ಸ್ಪರ್ಧೆಗೆ ಆಹ್ವಾನಿಸಿರಲಿಲ್ಲ. ಆದರೆ ಅವರು ನನ್ನೊಡನೆ ಎಂದೂ ವೈರವನ್ನು ಸಾಧಿಸಲಿಲ್ಲ, ಬದಲಾಗಿ ಅಕ್ಕರೆಯ ಹಾದಿ ಹಿಡಿದಿದ್ದರು. ಚಂಪಾ ಮತ್ತು ನಾನು ಅತ್ಯಂತ ಸಮೀಪದ ಮಿತ್ರರೆಂದು ತಿಳಿದು, ಆ ಮಟ್ಟಿಗೆ ನನ್ನೊಡನೆ ಅಂತರ ಕಾಯ್ದುಕೊಂಡಿದ್ದರೂ, ನಾನು ಅವರಿಗೆ ಟೀಕಾಕಾರನಾಗಿ, ವೈರಿಯಾಗಿ ಕಾಣಲಿಲ್ಲ.

ಧಾರವಾಡದ ಒಂದು ಪ್ರತಿಷ್ಠಿತ ಸಾಹಿತ್ಯಿಕ, ಸಾಂಸ್ಕೃತಿಕ ಸಂಸ್ಥೆಯನ್ನು ವಯಸ್ಸಾದ ಒಬ್ಬ ಅಸಾಹಿತ್ಯಿಕ ವ್ಯಕ್ತಿ ದಶಕಗಟ್ಟಲೆ ಆಳಿದ. ಅಲ್ಲಿ ಹುಟ್ಟಿ ಬಂದ ಜಾತಿ, ಹಣ, ಅ–ಸಹ್ಯ ಮಾತುಗಾರಿಕೆ, ದಬ್ಬಾಳಿಕೆ, ರಾಜಕೀಯ ಬೆಂಬಲ, ಸ್ವಾರ್ಥದ ದಾರಿಗಳಿಂದ ಊರಿನ ಸಜ್ಜನರು, ಗೌರವಸ್ಥರು ಅಲ್ಲಿಂದ ದೂರವಾದರು. ಅಂಥವನ ಜೊತೆಗೆ ಕೆಲವು ವರ್ಷ ಕೆಲಸ ಮಾಡಬೇಕಾಗಿ ಬಂದ ನಾನು ಅವನ ಕಾರ್ಯವೈಖರಿಯನ್ನು, ಸಂಸ್ಥೆಗೆ ಆಗಿರುವ ಹಾನಿಯನ್ನು ವಿವರಿಸಿ ಹೇಳಿದೆ. ನಟಭಯಂಕರನಾದ ಆತ ನನ್ನನ್ನು ಪ್ರಯತ್ನತಃ ದೂರವಿಟ್ಟ. ಕೆಸರಿನ ಮೇಲೆ ಕಲ್ಲೆಸೆಯುವ ಕೆಲಸ ನಾನಾದರೂ ಎಷ್ಟು ದಿನ ಮಾಡಬಹುದಿತ್ತು?